# ಅಂಗೈಯಲ್ಲಿ ಕ್ಯಾಲೆಂಡರ್



ಮ.ಯ.ದೊಡಮನಿ

ಅಂಗೈಯಲ್ಲಿ ವರ್ಷದ ಆದಿ ಅಂತ್ಯಗಳನ್ನು ಬಿಂಬಿಸುವ ಕೈಗನ್ನಡಿ. ಇದು ಮ.ಯ.ದೊಡಮನಿ ಕೌಶಲ್ಯದ ಸಾಧನೆ. ಕುತೂಹಲದಿಂದ ಕಳೆದ 27 ವರ್ಷಗಳಿಂದಲೂ ಚಿಕ್ಕದೊಂದು ಹಾಳೆಯಲ್ಲಿ ವರ್ಷದ ಕ್ಯಾಲೆಂಡರ್ ಸಿದ್ಧಪಡಿಸಿ ಅವರು ಅಚ್ಚರಿ ಮೂಡಿಸುತ್ತಾ ಬಂದಿದ್ದಾರೆ.

ಅವರು ಈ ಕಾರ್ಯದತ್ತ ಗಮನ ಹರಿಸಿದ ಸಂಗತಿ ಕೂಡ ಆಕಸ್ಮಿಕ. ಮೊದಲೆಲ್ಲ ಅವರಿಗೆ ಉಚಿತವಾಗಿ ಕ್ಯಾಲೆಂಡರ್ ನೀಡಲಾಗುತ್ತಿತ್ತು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಉಚಿತ ಕ್ಯಾಲೆಂಡರ್ ಸಿಗಲಿಲ್ಲ. ಈ ಕಾರಣ ಖರ್ಚಿಲ್ಲದ ಸಂಯುಕ್ತ ದಿನದರ್ಶಿ ರೂಪಿಸುವತ್ತ ಗಮನ ಹರಿಸಿದ್ದಾರೆ. ನಿರಂತರ ಪರಿಶ್ರಮದಿಂದ ಕೊನೆಗೂ ಅದರಲ್ಲಿ ಯಶಸ್ಸು ಸಾಧಿಸಿದ್ದಾರೆ.

ಆರಂಭದಲ್ಲಿ ಸುಮಾರು ಹದಿನೈದು ದಿನಗಳಲ್ಲಿ ಸಮರ್ಪಕ ಹಾಗೂ ಸರಳ ಕ್ಯಾಲೆಂಡರ್ ತಯಾರಿಸಿದ್ದಾಗಿ ಹೇಳುವ ಅವರು, ಈಗೆಲ್ಲ ಒಂದೆರಡು ದಿನಗಳಲ್ಲಿ ಅದನ್ನು ಮಾಡಿ ಮುಗಿಸುತ್ತೇನೆ ಎನ್ನುತ್ತಾರೆ.

ಈಗ ಅವರ ಕ್ಯಾಲೆಂಡರ್‌ನಲ್ಲಿ ಸಾಕಷ್ಟು ಸುಧಾರಣೆಯನ್ನೂ ಮಾಡಿರುವುದಾಗಿ ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಕರಪತ್ರದಷ್ಟು ಅಗಲದ ಹಾಳೆಯಲ್ಲಿ ವರ್ಷದ ದಿನದರ್ಶಿಕೆಯನ್ನು ಸೆರೆಹಿಡಿಯುವ ಮ.ಯ.ದೊಡಮನಿ ಅವರು ಮೂಲತಃ ಅಧ್ಯಾಪಕರು. ಕೆಲವು ವರ್ಷ ಪಿಯು ಮಂಡಳಿಯ ಉಪನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಈಗ ಸದ್ಯ ರಾಜ್ಯ ಭಾಷಾ ಆಯೋಗದ ಸದಸ್ಯರಾಗಿದ್ದಾರೆ. ಅವರು ಸಿದ್ಧಪಡಿಸಿದ ಸಂಯುಕ್ತ ದಿನದರ್ಶಿಯಲ್ಲಿ ವರ್ಷದ 12 ತಿಂಗಳ ತಾರೀಕನ್ನು ನಿಖರವಾಗಿ ತಿಳಿಯಬಹುದು. ಇದರಿಂದ ಹಾಳೆ ಹಾಗೂ ಸಮಯದ ಜೊತೆಗೆ ಹಣದ ಉಳಿತಾಯವೂ ಆಗುತ್ತದೆ.

ಸಾಕಷ್ಟು ಕೌಶಲ್ಯದಿಂದ ರೂಪಿಸಿರುವ ಈ ದಿನದರ್ಶಿಕೆ ಸರಳತೆ ಹಾಗೂ ಸಂಕ್ಷಿಪ್ತತೆಯ ಕಾರಣಕ್ಕೆ ತುಂಬಾ ಅನುಕೂಲವಾಗುತ್ತದೆ. ಸರಳ ಕ್ಯಾಲೆಂಡರ್ ಬೇಕು ಎಂದು ಕೇಳಿದವರಿಗೆ ಅವರು ಉಚಿತವಾಗಿ ನೀಡುತ್ತಾರೆ. ಕನ್ನಡ ಅಂಕಿಯಲ್ಲಿ ತಯಾರಿಸುವ ಈ ಕ್ಯಾಲೆಂಡರ್ ಪ್ರತಿವರ್ಷ ರಾಜ್ಯ ಸರ್ಕಾರದ ಡೇರಿಯಲ್ಲಿಯೂ ಅಚ್ಚಾಗುತ್ತಾ ಬಂದಿದೆ.

## ಹೊಸ ವರ್ಷದ ಶುಭಾಶಯಗಳು





**ಶಿಕ್ಷಣವೇ ಶಕ್ತಿ**

**೨೦೧೦ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್**

| ತಿಂಗಳುಗಳು | | | | | | | ತಾರೀಖು | | | | |
|---|---|---|---|---|---|---|---|---|---|---|---|
| ಜನವರಿ<br>ಅಕ್ಟೋಬರ್ | ಫೆಬ್ರವರಿ<br>ಮಾರ್ಚ್<br>ನವೆಂಬರ್ | ಏಪ್ರಿಲ್<br>ಜುಲೈ | ಮೇ | ಜೂನ್ | ಆಗಸ್ಟ್ | ಸೆಪ್ಟೆಂಬರ್<br>ಡಿಸೆಂಬರ್ | | | | | |
| ವಾರಗಳು | | | | | | | | | | | |
| ಶುಕ್ರ | ಸೋಮ | ಗುರು | ಶನಿ | ಮಂಗಳ | ಭಾನು | ಬುಧ | ೧ | ೮ | ೧೫ | ೨೨ | ೨೯ |
| ಶನಿ | ಮಂಗಳ | ಶುಕ್ರ | ಭಾನು | ಬುಧ | ಸೋಮ | ಗುರು | ೨ | ೯ | ೧೬ | ೨೩ | ೩೦ |
| ಭಾನು | ಬುಧ | ಶನಿ | ಸೋಮ | ಗುರು | ಮಂಗಳ | ಶುಕ್ರ | ೩ | ೧೦ | ೧೭ | ೨೪ | ೩೧ |
| ಸೋಮ | ಗುರು | ಭಾನು | ಮಂಗಳ | ಶುಕ್ರ | ಬುಧ | ಶನಿ | ೪ | ೧೧ | ೧೮ | ೨೫ | ★ |
| ಮಂಗಳ | ಶುಕ್ರ | ಸೋಮ | ಬುಧ | ಶನಿ | ಗುರು | ಭಾನು | ೫ | ೧೨ | ೧೯ | ೨೬ | ★ |
| ಬುಧ | ಶನಿ | ಮಂಗಳ | ಗುರು | ಭಾನು | ಶುಕ್ರ | ಸೋಮ | ೬ | ೧೩ | ೨೦ | ೨೭ | ★ |
| ಗುರು | ಭಾನು | ಬುಧ | ಶುಕ್ರ | ಸೋಮ | ಶನಿ | ಮಂಗಳ | ೭ | ೧೪ | ೨೧ | ೨೮ | ★ |

ರಚಿಸಿದವರು : **ಮ.ಯ. ದೊಡಮನಿ,** ಸದಸ್ಯರು, ಕರ್ನಾಟಕ ರಾಜಭಾಷಾ (ವಿಧಾಯೀ) ಆಯೋಗ, ಬೆಂಗಳೂರು - 9.
ಸದಸ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮೊ : ೯೪೪೯೫೧೮೩೪೯

ಶಾಸ್ತ್ರೀಯ ಭಾಷೆ ಕನ್ನಡ
ಅದೇ ಸತ್ಯ, ಅದೇ ನಿತ್ಯ

ಕಾಯಕವೇ ಕೈಲಾಸ
ಆಚಾರವೇ ಸ್ವರ್ಗ

ಕನ್ನಡ ಕಾಮಧೇನು
ಕರ್ನಾಟಕ ಕಲ್ಪವೃಕ್ಷ

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು.

**ಅಂಕಿ ಆಟದ ವಿನೋದ:** ದೊಡಮನಿಯವರು 2010ನೇ ಸಾಲಿನ ಕ್ಯಾಲೆಂಡರ್‌ನಲ್ಲಿ ಅಂಕಿ ಆಟಕ್ಕೂ ಅವಕಾಶ ಕೊಟ್ಟಿದ್ದಾರೆ. ಅದಕ್ಕಾಗಿ ಅವರು ಪ್ರತ್ಯೇಕ ಎರಡು ಕೋಷ್ಟಕಗಳನ್ನು ರಚಿಸಿದ್ದಾರೆ. ವರ್ಷದ ಯಾವ ತಾರೀಕು ಯಾವ ದಿನ ಬರುತ್ತದೆ ಎಂಬುದನ್ನು 'ಥಟ್' ಅಂತ ಹೇಳಲು ಅನುಕೂಲವಾಗುವಂತೆ ತಂತ್ರವನ್ನು ರೂಪಿಸಿದ್ದಾರೆ. ಇದು ಅಂಕಿ ಆಟದ ವಿನೋದವನ್ನು ಉಂಟು ಮಾಡುತ್ತದೆ.

ಅವರು ತಿಂಗಳು ಹಾಗೂ ದಿನಗಳಿಗೆ ಪ್ರತ್ಯೇಕವಾಗಿ ಒಂದು ಸಂಖ್ಯೆಯನ್ನು ನಿಗದಿಪಡಿಸಿದ್ದಾರೆ. ಅದು ಕೂಡ ಒಂದು ವಾರದಲ್ಲಿ ಬರುವ ಏಳು ದಿನಗಳಿಗೆ ಹೊಂದಿಕೆಯಾಗುವಂತಿದೆ. ಆದ್ದರಿಂದ ಸುಲಭವಾಗಿ ನೆನಪಿಡಬಹುದು. ಉದಾಹರಣೆಗೆ ಆಗಸ್ಟ್ ಹದಿನೈದು ಯಾವ ದಿನ ಬರಬಹುದು ಎಂದರೆ, ಭಾನುವಾರ ಬರುತ್ತದೆ ಎಂದು ನಿಖರವಾಗಿ ಹೇಳಬಹುದು. ಹೀಗೆ ಹೇಳಬೇಕೆಂದರೆ ಆಗಸ್ಟ್ 15ಕ್ಕೆ ಕೋಷ್ಟಕದಲ್ಲಿ ಸಂಕೇತಿಸಿರುವಂತೆ ಆಗಸ್ಟ್ ತಿಂಗಳ ಸಂಖ್ಯೆ 6ನ್ನು ಕೂಡಿಸಬೇಕು. ಆಗ ಅದರ ಮೊತ್ತ 21 ಆಗುತ್ತದೆ. ನಂತರ ಒಂದು ವಾರಕ್ಕೆ ಏಳು ದಿನಗಳು. ಆದ್ದರಿಂದ ಆ ಸಂಖ್ಯೆಯನ್ನು ಏಳರಿಂದ ಭಾಗಿಸಬೇಕು. ಶೇಷ ಸೊನ್ನೆಯಾಗುತ್ತದೆ. ಉಳಿಯುವ ಶೇಷವನ್ನು ದಿನದ ಕೋಷ್ಟಕದಲ್ಲಿ ಸಂಕೇತಿಸಿರುವ ಸಂಖ್ಯೆಗೆ ತಾಳೆ ನೋಡಿದರೆ ಯಾವ ದಿನ ಎಂದು ನಿಖರವಾಗಿ ಗೊತ್ತಾಗುತ್ತದೆ. ಹೀಗೆ ಯಾವ ದಿನವನ್ನಾದರೂ ಕಂಡು ಹಿಡಿಯಬಹುದು.

ಇದನ್ನು ಒಂದು ಹವ್ಯಾಸವಾಗಿ ಮಾಡಿಕೊಂಡು ಬಂದಿರುವ ದೊಡಮನಿ ಅವರು, ಈ ಕಾರ್ಯದಿಂದ ಆತ್ಮತೃಪ್ತಿ ಪಡೆಯುತ್ತಿರುವುದಾಗಿ ಹೇಳುತ್ತಾರೆ. ಅವರ ದೂರವಾಣಿ ಸಂಪರ್ಕ. 080- 23493474, 9449518349.

ಸೂಚನೆ: 7ಕ್ಕಿಂತ ಕಡಿಮೆ ಸಂಖ್ಯೆಯಾಗಿದ್ದರೆ ಭಾಗಿಸದೆ ವಾರ ಪತ್ತೆ ಮಾಡಿ.

■ ರಾಘು

| ಶೇಷ | ವಾರ |
|---|---|
| 1 | ಸೋಮವಾರ |
| 2 | ಮಂಗಳವಾರ |
| 3 | ಬುಧವಾರ |
| 4 | ಗುರುವಾರ |
| 5 | ಶುಕ್ರವಾರ |
| 6 | ಶನಿವಾರ, |
| 0 | ಭಾನುವಾರ |

| ತಿಂಗಳು | ಸಂಖ್ಯೆ |
|---|---|
| ಜನವರಿ | 4 |
| ಫೆಬ್ರವರಿ | 0 |
| ಮಾರ್ಚ್ | 0 |
| ಏಪ್ರಿಲ್ | 3 |
| ಮೇ | 5 |
| ಜೂನ್ | 1 |

| ತಿಂಗಳು | ಸಂಖ್ಯೆ |
|---|---|
| ಜುಲೈ | 3 |
| ಆಗಸ್ಟ್ | 6 |
| ಸೆಪ್ಟೆಂಬರ್ | 2 |
| ಅಕ್ಟೋಬರ್ | 4 |
| ನವೆಂಬರ್ | 0 |
| ಡಿಸೆಂಬರ್ | 2 |